# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (106) 83 |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08.12.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳನ್ನು ಒಟ್ಟುಗೂಡಿಸಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಪರಿವರ್ತಿಸಲು ಸರ್ಕಾರವು ಅನುಮತಿ ನೀಡಿದೆಯೇ; ನೀಡಿದ್ದಲ್ಲಿ ಕಳೆದ 02 ವರ್ಷಗಳಲ್ಲಿ ಎಷ್ಟು ಶಾಲೆಗಳನ್ನು ಪರಿವರ್ತಿಸಲಾಗಿದೆ; (ಶಾಲಾವಾರು ಮಾಹಿತಿ ನೀಡುವುದು) | ಹೌದು, 2024-25 ರವರೆಗೆ ಒಂದೇ ಆವರಣದಲ್ಲಿ ನಡೆಯುತ್ತಿರುವ ಅಥವಾ ಅದೇ ಗ್ರಾಮ /ಪಟ್ಟಣ/ ನಗರದಲ್ಲಿ ಆದರೆ ಸಮೀಪದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಕ್ರೋಢೀಕರಿಸಿ 309 ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಪರಿವರ್ತಿಸಲು ಸರ್ಕಾರವು ಅನುಮತಿ ನೀಡಿದೆ.<br>2023-24 ರಲ್ಲಿ 23 ಕೆ.ಪಿಎಸ್ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, 2024-25 ನೇ ಸಾಲಿನಲ್ಲಿ ಯಾವುದೇ ಕೆ.ಪಿ.ಎಸ್. ಶಾಲೆಗಳನ್ನು ಪ್ರಾರಂಭಿಸಿರುವುದಿಲ್ಲ. (ವಿವರವನ್ನು ಲಗತ್ತಿಸಿದೆ.) |
| ಆ | ರಾಜ್ಯದಲ್ಲಿನ ಯಾವ-ಯಾವ ಶಾಲೆಗಳನ್ನು, ಯಾವ ಕಾರಣಕ್ಕಾಗಿ ಪರಿವರ್ತಿಸಲಾಗಿದೆ; (ವಿವರ ನೀಡುವುದು) | ಕಳೆದ 02 ವರ್ಷಗಳಲ್ಲಿ 309 ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಪಟ್ಟಿ ಲಗತ್ತಿಸಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪೂರ್ವ ಪ್ರಾಥಮಿಕ ತರಗತಿಯಿಂದ ಪದವಿ ತರಗತಿಯವರೆಗೆ ಒಂದೇ ಸೂರಿನಡಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಪರಿವರ್ತಿಸಲಾಗಿದೆ.<br>ಈ ಕೆಳಕಂಡ ಮಾನದಂಡಗಳನ್ನು ಆಧರಿಸಿ ಕೆ.ಪಿ.ಎಸ್. ಶಾಲೆಗಳನ್ನಾಗಿ ಪರಿವರ್ತಿಸಲು ಕ್ರಮಕೈಗೊಳ್ಳಲಾಗಿದೆ.<br>1.ಒಂದೇ ಆವರಣದಲ್ಲಿ ಹೊಂದಿಕೊಂಡಂತೆ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆ/ಪದವಿಪೂರ್ವ ಕಾಲೇಜು ಇರಬೇಕು. (ಕನಿಷ್ಟ 500 ಮಕ್ಕಳ ದಾಖಲಾತಿ ಇರಬೇಕು) ಅಥವಾ ಒಂದೇ ಆವರಣದಲ್ಲಿ ಹೊಂದಿಕೊಂಡಂತೆ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆ ಇರಬೇಕು. (ಕನಿಷ್ಟ 500 ಮಕ್ಕಳ ದಾಖಲಾತಿ ಇರಬೇಕು)<br>2.ಒಂದೇ ಆವರಣದಲ್ಲಿ ಹೊಂದಿಕೊಂಡಂತೆ ಶಾಲೆಗಳು ಇಲ್ಲದಿದ್ದಲ್ಲಿ, ಸುಮಾರು 500 ಮೀ ಅಂತರದಲ್ಲಿ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆ ಪದವಿಪೂರ್ವ ಕಾಲೇಜು ಇರಬೇಕು. (ಕನಿಷ್ಟ 500 ಮಕ್ಕಳ ದಾಖಲಾತಿ ಇರಬೇಕು) * ಅಥವಾ ಒಂದೇ ಆವರಣದಲ್ಲಿ ಹೊಂದಿಕೊಂಡಂತೆ ಶಾಲೆಗಳು ಇಲ್ಲದಿದ್ದಲ್ಲಿ, ಸುಮಾರು 500 ಮೀ ಅಂತರದಲ್ಲಿ |

| | | |
|---|---|---|
| | | ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆ ಇರಬೇಕು. (ಸುತ್ತೋಲೆ ಲಗತ್ತಿಸಿದೆ) |
| ಇ | ಈ ರೀತಿಯಾದ ಕ್ರಮಗಳಿಂದ ಕನ್ನಡ ಶಾಲೆಗಳು ಮುಚ್ಚುವ ಪ್ರಕ್ರಿಯೆ ಸರ್ಕಾರವೇ ಪ್ರಾರಂಭಿಸಿದಂತಾಗುವುದಿಲ್ಲವೇ; (ವಿವರ ನೀಡುವುದು); | ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಿರುವುದರಿಂದ ಕನ್ನಡ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ ಸರ್ಕಾರವೇ ಪ್ರಾರಂಭಿಸಿದಂತಾಗುವುದಿಲ್ಲ.<br>ಕೆಪಿ.ಎಸ್. ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜೊತೆಗೆ ದ್ವಿ-ಭಾಷಾ ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಲಾಗಿದೆ. |
| ಈ | ಇಂತಹ ಕ್ರಮಗಳಿಂದಾಗಿ ಕನ್ನಡ ಶಾಲೆಯಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು: (ವಿವರ ನೀಡುವುದು) | ಕೆ.ಪಿ.ಎಸ್.ಗಳ ಪ್ರಾರಂಭದಿಂದ ಕನ್ನಡ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಕಡಿಮೆಯಾಗಿರುವುದಿಲ್ಲ, |
| ಉ | ಕಳೆದ 03 ವರ್ಷಗಳಲ್ಲಿ ಕನ್ನಡ ಶಾಲೆಯಲ್ಲಿ ಮಕ್ಕಳ ದಾಖಲಾತಿ ಪ್ರಮಾಣವು ಶೇಕಡಾ ಎಷ್ಟು ಕಡಿಮೆಯಾಗಿದೆ; ಕಡಿಮೆಯಾಗಲು ಸೂಕ್ತ ಕಾರಣ ಒದಗಿಸುವುದು ಹಾಗೂ ಈ ಕುರಿತು ಸರ್ಕಾರದ ಕ್ರಮವೇನು? (ವಿವರ ನೀಡುವುದು) | ಕೆಪಿಎಸ್ ಶಾಲೆಗಳಲ್ಲಿ ದಾಖಲಾತಿ ಹೆಚ್ಚಾಗುತ್ತಿದ್ದರೂ ಸಹ ಉಳಿದ ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಕಳೆದ 3 ವರ್ಷಗಳ ದಾಖಲಾತಿ ಅಂಕಿಅಂಶಗಳು ಈ ಕೆಳಗಿನಂತಿದೆ.<br><br>ವರ್ಷ — ದಾಖಲಾತಿ<br>2023-24 — 52,33,585<br>2024-25 — 49,62,252<br>2025-26 — 46,47,353<br><br>2025-26 ನೇ ಸಾಲಿನಲ್ಲಿ ಕನ್ನಡ ಶಾಲೆಯಲ್ಲಿ ಮಕ್ಕಳ ದಾಖಲಾತಿ ಪ್ರಮಾಣವು ಶೇಕಡ 11.20 ರಷ್ಟು ಕಡಿಮೆಯಾಗಿರುತ್ತದೆ. ಪಾಲಕರ ಆಂಗ್ಲ ಮಾಧ್ಯಮದ ವ್ಯಾಮೋಹ, ಕೇಂದ್ರ ಪಠ್ಯಕ್ರಮದ ಶಾಲೆಗಳಲ್ಲಿ ಪ್ರವೇಶ ಪಡೆಯುವುದು ಇತ್ಯಾದಿ ಕಾರಣಗಳಿಂದ ಕನ್ನಡ ಶಾಲೆಯಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾಗುತ್ತಿದೆ.<br><br>**ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಉತ್ತಮಪಡಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.**<br>ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಮಧ್ಯಾಹ್ನ ಉಪಾಹಾರ, ಪೂರಕ ಪೌಷ್ಟಿಕಾಂಶ, ಹಾಗೂ ಶೂ-ಸಾಕ್ಸ್ ಗಳ ವಿತರಣೆ, 2025ರ ನವೆಂಬರ್ 14 ರಿಂದ 30 ಜೂನ್ 2026ರ ವರೆಗೆ ದಾಖಲಾತಿ ಜಾಗೃತಿ ಅಭಿಯಾನದ ಮೂಲಕ ದಾಖಲಾತಿಯನ್ನು ಹೆಚ್ಚಿಸಲು ಕ್ರಮ , ಪೋಷಕರ-ಶಿಕ್ಷಕರ ಮಹಾಸಭೆಯನ್ನು ಆಯೋಜಿಸಿ ಸರ್ಕಾರಿ ಶಾಲೆಗಳಲ್ಲಿ ದೊರೆಯುತ್ತಿರುವ ಸೌಲಭ್ಯಗಳು ಮತ್ತು ಗುಣಮಟ್ಟದ ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು, ಒಂದೇ ಸೂರಿನಡಿಯಲ್ಲಿ ಪೂರ್ವ ಪ್ರಾಥಮಿಕದಿಂದ |

| | | |
|---|---|---|
| | | ಪದವಿ ಪೂರ್ವ ತರಗತಿಯವರೆಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು 900 ಶಾಲೆಗಳನ್ನು ಕೆಪಿಎಸ್ ಶಾಲೆಗಳಾಗಿ ಉನ್ನತೀಕರಿಸುವುದು, ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸುವುದು, ದ್ವಿ ಭಾಷಾ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸುವುದು, 1 ನೇ ತರಗತಿಯಿಂದ ಕಂಪ್ಯೂಟರ್ ಶಿಕ್ಷಣ, ಕಲಿಕೋಪಕರಣಗಳನ್ನು ಒದಗಿಸುವುದು, ವೃತ್ತಿ ಶಿಕ್ಷಣ , ವೃತ್ತಿ ಮಾರ್ಗದರ್ಶನ ತರಬೇತಿಗಳನ್ನು ನೀಡುವುದು, ನುರಿತ ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. |

**ಇಪಿ 367 ಯೋಸಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಅನುಬಂಧ - 1



2023–24 ಮತ್ತು 2025–6 ನೇ ಸಾಲಿನಲ್ಲಿ ಪ್ರಾರಂಭಿಸಲಾದ 24 ಹೊಸ ಕೆ.ಪಿ.ಎಸ್ ಶಾಲೆಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ಕ್ರ.ಸಂ | ತಾಲ್ಲೂಕಿನ ಹೆಸರು /ವಿಧಾನಸಭಾ ಕ್ಷೇತ್ರ | ಪಂಚಾಯಿತಿ | ಕೆ.ಪಿ.ಎಸ್ ಹೆಸರು |
|---|---|---|---|---|---|
| 1 | ಬೆಂಗಳೂರು ಉತ್ತರ | 1 | ಉತ್ತರ–3 | ಶಿವಾಜಿನಗರ | ಕೆ.ಪಿ.ಎಸ್ ವಿ.ಕೆ.ಓಬೆದುಲ್ಲಾ |
| 2 | ಬಳ್ಳಾರಿ | 2 | ಕುರುಗೋಡು | ಕುರುಗೋಡು | ಕೆ.ಪಿ.ಎಸ್ ಕಲ್ಲುಕಂಬ |
| 3 | ಬೆಳಗಾವಿ | 3 | ಬೈಲಹೊಂಗಲ | ವಕ್ಕುಂದ | ಕೆ.ಪಿ.ಎಸ್ ವಕ್ಕುಂದ್ |
| 4 | ಬೀದರ್ | 4 | ಔರಾದ | ಔರಾದ | ಕೆ.ಪಿ.ಎಸ್ ಔರಾದ |
| | ಬೀದರ್ | 5 | ಹುಮನಬಾದ್ | ದುಬಲಗುಂಡಿ | ಕೆ.ಪಿ.ಎಸ್ ದುಬಲಗುಂಡಿ |
| 5 | ಧಾರವಾಡ | 6 | ನವಲಗುಂದ | ಚಿಲಕವಾಡ | ಕೆ.ಪಿ.ಎಸ್ ಚಿಲಕವಾಡ್ |
| 6 | ಗದಗ | 7 | ಗಜೇಂದ್ರಗಡ | ಗಜೇಂದ್ರಗಡ | ಕೆ.ಪಿ.ಎಸ್ ಗಜೇಂದ್ರಗಡ |
| | ಗದಗ | 8 | ಲಕ್ಷ್ಮೇಶ್ವರ | ಘಟ್ ಗಾಂವ್ ಬಡ್ನಿ | ಕೆ.ಪಿ.ಎಸ್ ಘಟ್‌ಗಾಂವ್ ಬಡ್ನಿ |
| 7 | ಕಲಬುರಗಿ | 9 | ಕಮಲಾಪುರ | ಕಮಲಾಪುರ | ಕೆ.ಪಿ.ಎಸ್ ಕಮಲಾಪುರ |
| | ಕಲಬುರಗಿ | 10 | ಜೇವರ್ಗಿ | ಅಂಕಲಗಿ | ಕೆ.ಪಿ.ಎಸ್ ಅಂಕಲಗಿ |
| | ಕಲಬುರಗಿ | 11 | ಶಹಬಾದ | ರಾವೂರ | ಕೆ.ಪಿ.ಎಸ್ ರಾವೂರ |
| | ಕಲಬುರಗಿ | 12 | ಚಿತ್ತಾಪುರ | ಲಾಡ್ಲಾಪುರ | ಕೆ.ಪಿ.ಎಸ್ ಲಾಡ್ಲಾಪುರ |
| 8 | ಕೊಪ್ಪಳ | 13 | ಗಂಗಾವತಿ | ಕೆಸರಟ್ಟಿ | ಕೆ.ಪಿ.ಎಸ್ ಕೆಸರಟ್ಟಿ |
| 9 | ಮೈಸೂರು | 14 | ಹೆ.ಡಿ.ಕೋಟೆ | ಅಂತರಸಂತೆ | ಕೆ.ಪಿ.ಎಸ್ ಅಂತರಸಂತೆ |
| 10 | ರಾಯಚೂರು | 15 | ಸಿರಿವರ | ಕವಿತಾಲ್ | ಕೆ.ಪಿ.ಎಸ್ ಕವಿತಾಲ್ |
| 11 | ವಿಜಯನಗರ | 16 | ಹಗರಿಬೊಮ್ಮನಹಳ್ಳಿ | ಮೋರಿಗೇರಿ | ಕೆ.ಪಿ.ಎಸ್ ಮೋರಿಗೇರಿ |
| 12 | ವಿಜಯಪುರ | 17 | ಬಸವನಬಾಗೇವಾಡಿ | ಬಸವನಬಾಗೇವಾಡಿ | ಕೆ.ಪಿ.ಎಸ್ ಬಸವನಬಾಗೇವಾಡಿ |
| | ವಿಜಯಪುರ | 18 | ತಿಕೋಟ | ಬಾಬಾನಗರ | ಕೆ.ಪಿ.ಎಸ್ ಬಾಬಾನಗರ |
| | ವಿಜಯಪುರ | 19 | ತಾಳಿಕೋಟೆ | ತಾಳಿಕೋಟೆ | ಕೆ.ಪಿ.ಎಸ್ ತಾಳಿಕೋಟೆ |
| | ವಿಜಯಪುರ | 20 | ನಿಡಗುಂದಿ | ಕಮದಾಳ್ | ಕೆ.ಪಿ.ಎಸ್ ಕಮದಾಳ್ |
| 13 | ಯಾದಗಿರಿ | 21 | ವಡಗೇರ | ವಡಗೇರ | ಕೆ.ಪಿ.ಎಸ್ ವಡಗೇರ |
| | ಯಾದಗಿರಿ | 22 | ಹುಣಸಗಿ | ನಾರಾಯಣಪುರ | ಕೆ.ಪಿ.ಎಸ್ ನಾರಾಯಣಪುರ |
| | ಯಾದಗಿರಿ | 23 | ಯಾದಗಿರಿ | ಯಾದಗಿರಿ | ಕೆ.ಪಿ.ಎಸ್ ಯಾದಗಿರಿ |
| 14 | ಶಿವಮೊಗ್ಗ | 24 | ಶಿವಮೊಗ್ಗ | ಪಿಳಂಗೆರೆ | ಕೆ.ಪಿ.ಎಸ್ ಪಿಳ್ಳಂಗೆರೆ |

ನಿರ್ದೇಶಕರು (ಗುಣಮಟ್ಟ)
ಸಮಗ್ರ ಶಿಕ್ಷಣ ಕರ್ನಾಟಕ

Digitally signed by Maruthi M R
Date: 28-11-2025 16:23:51

೦೪

# ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 204 ಪಿಎಂಸಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:25-10-2021

## ಸುತ್ತೋಲೆ

ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವಲ್ಲಿ ಸರ್ಕಾರದ ಜವಾಬ್ದಾರಿಯೊಂದಿಗೆ ಸಮುದಾಯದ ಪಾತ್ರವೂ ಅಷ್ಟೇ ಮಹತ್ವದ್ದಾಗಿರುತ್ತದೆ. ಸರ್ಕಾರವು ಸೀಮಿತ ಸಂಪನ್ಮೂಲಗಳ ಮಿತಿಯಲ್ಲಿ ಶಾಲೆಗಳಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಕ್ರಿಯಾಶೀಲ ಸಮುದಾಯವು ಸರ್ಕಾರದೊಂದಿಗೆ ಕೈಜೋಡಿಸಿದಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವ ಶಾಲೆಗಳನ್ನು ಇನ್ನಷ್ಟು ಬಲಪಡಿಸಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ಸಮುದಾಯದ ಸಹಕಾರ ಮತ್ತು ಬೆಂಬಲವನ್ನು ಸರ್ಕಾರವು ಅಪೇಕ್ಷಿಸುತ್ತದೆ.

ಪೂರ್ವ ಪ್ರಾಥಮಿಕದಿಂದ 12ನೇ ತರಗತಿಯವರೆಗೆ ಒಂದೇ ಸೂರಿನಡಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಪ್ರಾರಂಭಿಸಲಾಗಿರುವ ಕೆ.ಪಿ.ಎಸ್ ಶಾಲೆಗಳು ಸಮುದಾಯವನ್ನು ಆಕರ್ಷಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಸಮುದಾಯದ ಭಾಗವಾಗಿರುವ ಎನ್.ಜಿ.ಓ. ಗಳು ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಶಿಕ್ಷಣಾಸಕ್ತರು ಕೆ.ಪಿ.ಎಸ್ ಶಾಲೆಗಳ ಬಲವರ್ಧನೆಯ ಕಾರ್ಯದಲ್ಲಿ ಪಾಲ್ಗೊಳ್ಳಲು ಬಯಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಪ್ರಾರಂಭಿಸಲಾಗಿರುವ 276 ಕೆ.ಪಿ.ಎಸ್ ಶಾಲೆಗಳ ಸಂಖ್ಯೆಯನ್ನು ಇನ್ನಷ್ಟು ವಿಸ್ತರಿಸುವ ಕುರಿತು ಸರ್ಕಾರ ಗಂಭೀರ ಚಿಂತನೆ ನಡೆಸಿ ಹಾಲಿಯಿರುವ ಸರ್ಕಾರಿ ಶಾಲೆಗಳಿಗೆ ಆರ್ಥಿಕ ಮತ್ತು ಶೈಕ್ಷಣಿಕ ಸೌಲಭ್ಯ ಒದಗಿಸುವುದರ ಮೂಲಕ ಉತ್ತಮ ಗುಣಮಟ್ಟದ ಮೂಲ ಸೌಕರ್ಯಗಳನ್ನು, ಕಲಿಕಾ ವಾತಾವರಣವನ್ನು ನಿರ್ಮಿಸುವ ಮೂಲಕ ಕೆ.ಪಿ.ಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ಜನಪ್ರತಿನಿಧಿಗಳು, ಎನ್.ಜಿ.ಓ. ಗಳು, ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಶಿಕ್ಷಣಾಸಕ್ತ ದಾನಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿರುತ್ತದೆ. ಸರ್ಕಾರವು ಪ್ರಸ್ತುತ ಕೆ.ಪಿ.ಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ಇರುವ ನಿಯಮಗಳನುಸಾರ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತದೆ.

**ಹೊಸ ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲು ಆಸಕ್ತಿ ಇರುವ ಎನ್.ಜಿ.ಓ. ಗಳು, ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಆಸಕ್ತ ದಾನಿಗಳು ಶಾಲೆಗಳನ್ನು ಪ್ರಾರಂಭಿಸಲು ಶಾಲೆಗಳ ಆಯ್ಕೆಗೆ ಮಾನದಂಡಗಳು:-**

1. ಅನುದಾನಿತ/ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಆಯ್ಕೆಗೆ ಪರಿಗಣಿಸಬಾರದು.

KPS

1905
27 OCT 2021

2. ಆದಷ್ಟೂ ಒಂದೇ ಆವರಣದಲ್ಲಿ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿರಬೇಕು.
3. ಒಂದೇ ಆವರಣದಲ್ಲಿ ಕಾರ್ಯನಿರ್ವಹಿಸದಿರುವ ಆದರೆ ಅದೇ ಗ್ರಾಮ/ಪಟ್ಟಣ/ನಗರದ ಸಮೀಪದಲ್ಲಿ ಕಾರ್ಯನಿರ್ವಹಿಸುವ (ಸುಮಾರು 500 ಮೀ ಅಂತರ) ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಆಯ್ಕೆ ಮಾಡುವುದು.
4. ಕ್ರಸಂ 2 ಮತ್ತು 3ರಂತೆ ಶಾಲೆಗಳು ಲಭ್ಯವಿಲ್ಲದಿದ್ದಲ್ಲಿ, ಒಂದೇ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆಗೆ ಪರಿಗಣಿಸುವುದು.
5. ಒಟ್ಟು ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ 500 ಕ್ಕಿಂತ ಹೆಚ್ಚಾಗಿರುವ ಶಾಲೆಗಳನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡುವುದು.
6. ನಗರ ಪ್ರದೇಶದಲ್ಲಿ ಸೂಕ್ತ ಸ್ಥಳಾವಕಾಶ/ಆವರಣವನ್ನು ಹೊಂದಿರುವ ಶಾಲೆಗಳು ಮತ್ತು ಗ್ರಾಮ/ಪಟ್ಟಣ ಪ್ರದೇಶಗಳಲ್ಲಿ ಕನಿಷ್ಠ 3–5 ಎಕರೆ ಜಾಗವನ್ನು ಹೊಂದಿರುವ ಶಾಲೆಗಳನ್ನು ಆಯ್ಕೆ ಮಾಡುವುದು.
7. ಈಗಾಗಲೇ ಕೆಪಿಎಸ್ ಪ್ರಾರಂಭವಾಗಿರುವ ಗ್ರಾಮ/ಹೋಬಳಿಗಳನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿರುವ ಶಾಲೆಗಳನ್ನು ಆಯ್ಕೆ ಮಾಡುವುದು.
8. ಗುರುತಿಸಲಾದ ಶಾಲೆಗಳಿಗೆ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಮಾಡುವ ಸಂಪೂರ್ಣ ವೆಚ್ಚವನ್ನು ದಾನಿಗಳು / ಸಂಸ್ಥೆಗಳು ಭರಿಸಬೇಕು. ಸರ್ಕಾರದಿಂದ ಈ ಯೋಜನೆಗಳಿಗೆ ಯಾವುದೇ ರೀತಿಯ ಆರ್ಥಿಕ ಸಹಾಯವನ್ನು ಅಪೇಕ್ಷಿಸುವಂತಿಲ್ಲ. ಸರ್ಕಾರದಿಂದ ಅಗತ್ಯಬೀಳುವ ಶಿಕ್ಷಕರನ್ನು ಒದಗಿಸಲಾಗುವುದು.
9. ಕಟ್ಟಡ ನಿರ್ಮಾಣ, ಮೂಲ ಸೌಕರ್ಯ, ಹೆಚ್ಚುವರಿ ಶಿಕ್ಷಕರ ಅಗತ್ಯತೆ, ಇತರೆ ಅಭಿವೃದ್ಧಿ ಕಾರ್ಯಗಳನ್ನು ಒಳಗೊಂಡಂತೆ ಒಂದು ವಿವರವಾದ ಕ್ರಿಯಾಯೋಜನೆಯನ್ನು ಸಲ್ಲಿಸಬೇಕು.
10. ಆಸಕ್ತ ಸಂಸ್ಥೆಗಳು / ವ್ಯಕ್ತಿಗಳು ನಿಗದಿತ ಸಮಯದೊಳಗೆ ತಮ್ಮ ಯೋಜನೆಯನ್ನು ಪೂರ್ಣಗೊಳಿಸಲು ಸಿದ್ಧರಿರಬೇಕು.
11. ಇಂತಹ ಸಂಸ್ಥೆ / ವ್ಯಕ್ತಿಗಳು ತಮ್ಮ ಯೋಜನೆಯ ಅನುಷ್ಠಾನದಲ್ಲಿ ಸಂಪೂರ್ಣ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ವಹಿಸಬೇಕು ಹಾಗೂ ಸಂಬಂಧಿಸಿದ ಶಾಲೆಯ ಎಸ್.ಡಿ.ಎಂ.ಸಿ ಯ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಬೇಕು.
12. ಪೂರ್ವ ಪ್ರಾಥಮಿಕ ವಿಭಾಗವನ್ನು ಪ್ರಾರಂಭಿಸಿ, ಅಗತ್ಯ ಮೂಲಭೂತ ಸೌಕರ್ಯ ಮತ್ತು ಅತಿಥಿ ಶಿಕ್ಷಕರು ಮತ್ತು ಆಯಾಗಳನ್ನು ನೇಮಕ ಮಾಡಿಕೊಂಡು ಅವರಿಗೆ ಎರಡು ವರ್ಷದ ಅವಧಿಯವರೆಗೆ ನಿಯಮಾನುಸಾರ ಗೌರವ ಸಂಭಾವನೆಯನ್ನು ಪಾವತಿಸಲು ಸಿದ್ಧರಿರಬೇಕು.
13. ICT-ಚಟುವಟಿಕೆಗಳಾದ ಸ್ಮಾರ್ಟ್ ಕ್ಲಾಸ್, ಕಂಪ್ಯೂಟರ್ ಕೊಠಡಿ ಮತ್ತು ಮಕ್ಕಳ ಸಂಖ್ಯೆಗನುಗುಣವಾಗಿ ಕಂಪ್ಯೂಟರ್‌ಗಳನ್ನು ಒದಗಿಸಲು ಸಿದ್ಧರಿರಬೇಕು.

14. ಶಾಲೆಗಳಿಗೆ ಅಗತ್ಯವಿರುವ ಬೋಧನಾ ಕೊಠಡಿಗಳು, ಪ್ರಯೋಗಾಲಯ ಕೊಠಡಿಗಳು, ಗ್ರಂಥಾಲಯ ಕೊಠಡಿಗಳು, ಕ್ರೀಡಾ ಕೊಠಡಿಗಳು, ಸಭಾಭವನ, ಭೋಜನಾಲಯ ಕೊಠಡಿ, ಶುದ್ಧಕುಡಿಯುವ ನೀರಿನ ಘಟಕ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಿದ್ಧರಿರಬೇಕು.
15. ಸಂಸ್ಥೆ/ವ್ಯಕ್ತಿಗಳು ಇಚ್ಛಿಸಿದಲ್ಲಿ ತಾವು ಅಭಿವೃದ್ಧಿಪಡಿಸಿದ ಶಾಲೆಗಳಿಗೆ ತಾವು ಸೂಚಿಸಿದ ಹೆಸರನ್ನು ಇಡಲು ಪ್ರಸ್ತಾಪಿಸಬಹುದು. ಈ ಕುರಿತು ಸರ್ಕಾರವು ಪರಿಗಣಿಸುತ್ತದೆ.

ಈ ಮೇಲ್ಕಂಡ ಅಂಶಗಳಿಗೆ ಬದ್ಧರಾಗಿ ಸರ್ಕಾರದ ಆಶಯ ಮತ್ತು ನೀತಿಗೆ ಕ್ರಿಯಾಶೀಲ ಸಮುದಾಯದ ಸಹಭಾಗಿತ್ವದಲ್ಲಿ ಉತ್ತಮಗುಣಮಟ್ಟದ ಕಲಿಕೆಯನ್ನು ಒದಗಿಸುವ ಯಾವುದೇ ಪ್ರಯತ್ನಗಳಿಗೆ ಬೆಂಬಲವಾಗಿ ನಿಂತು ಸರ್ಕಾರವು ಈಗಾಗಲೇ ನಿಗದಿಪಡಿಸಿರುವ ಮಾನದಂಡಗಳನುಸಾರ ಕೆ.ಪಿ.ಎಸ್. ಶಾಲೆಗಳನ್ನು ಪ್ರಾರಂಭಿಸಲು ವ್ಯಕ್ತಿಗಳು / ಸಂಸ್ಥೆಗಳು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ತಮ್ಮ ನಂಬುಗೆಯ,

ಹೆಚ್. ಎಸ್. ಶಿ 1/2021

(ಹೆಚ್.ಎಸ್. ಶಿವಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ,

(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ.

**ಇವರಿಗೆ:**

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ.
6. ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ,
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ / ಮಾಹಿತಿ ಕೇಂದ್ರ.

**ಪ್ರತಿ(ಮಾಹಿತಿಗಾಗಿ):**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ.

3. ಸರ್ಕಾರದ ಅಪರ ಕಾರ್ಯದರ್ಶಿ(ಆಡಳಿತ), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಸಹಾಯಕ.
4. ಸರ್ಕಾರದ ಉಪ ಕಾರ್ಯದರ್ಶಿ(ಸೇವೆಗಳು–1 ಮತ್ತು 2), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಸಹಾಯಕರು.